ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದ ಬಗ್ಗೆ

೭೪೦. ಶ್ರೀ ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಕೊಡಬೇಕಾದ ನಿಗದಿತ ವಸ್ತುಗಳನ್ನು ಪೂರೈಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳಲ್ಲಿ ವಿದ್ಯುತ್ ದೀಪಗಳನ್ನು ಉರಿಸಲು ಹಾಸಿಗೆಗಳು, ದುರಸ್ತಿಯಲ್ಲಿರುವುದರಿಂದ ಯಾವುದೇ ಪೌಷ್ಟಿಕ ಆಹಾರಗಳನ್ನೊಳಗೊಂಡ ವಸ್ತುಗಳನು ಸರಬರಾಜು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ನಿಗದಿ ಪಡಿಸಲಾಗಿರುವ ೧೦೦–೦೦ ರೂಗಳಲ್ಲಿ ಒಂದು ಉಪಹಾರ ಮತ್ತು ಎರಡು ಊಟವನ್ನು ಒದಗಿಸಲಾಗುತ್ತಿದೆ. ನಿಗದಿತ ಪ್ರಮಾಣದಲ್ಲಿ ತರಕಾರಿಯನ್ನು ಒದಗಿಸಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯ ಕಲ್ಪಿಸಲು ಭೋಜನವೆಚ್ಚವನ್ನು ೧೦೦–೦೦ರೂಗಳಿಂದ ೧೫೦–೦೦ ರೂಗಳಿಗೆ ಹೆಚ್ಚಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ದರಖಾಸ್ತು ಸಮಿತಿ

೫೪೦. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಂಗಳೂರು ದರಖಾಸ್ತು ಸಮಿತಿಯಲ್ಲಿರುವ ಅಧಿಕಾರಿ ಸದಸ್ಯರುಗಳು ಯಾರು ?

ಆ) ಸಮಿತಿಯಲ್ಲಿ ದರಖಾಸ್ತು ಮಂಜೂರಾತಿ ಬಗ್ಗೆ ಕೈಗೊಂಡ ನಿರ್ಣಯವನ್ನು ಸಂಬಂಧಪಟ್ಟ ಅಧಿಕಾರಿಗಳು ಜಾರಿಗೊಳಿಸದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ಚಿಕ್ಕಮಗಳೂರು ದರಖಾಸ್ತು ಸಮಿತಿಯಲ್ಲಿರುವ ಅಧಿಕಾರಿ ಸದಸ್ಯರು

೧ ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು

೨ ಸಹಾಯಕ–ಕಾರ್ಯಪಾಲಕ ಅಭಿಯಂತರರು, ಚಿಕ್ಕಮಗಳೂರು

೩ ವಲಯ ಅರಣ್ಯಾಧಿಕಾರಿಗಳು, ಚಿಕ್ಕಮಂಗಳೂರು

ಆ) ಭೂ ಮಂಜೂರಾತಿ ಸಲಹಾ ಸಮಿತಿಯ ನಡವಳಿಕೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಭೂ ಮಂಜೂರಾತಿ ನಿಯಮ ೧೯೬೯ರ ಪ್ರಕಾರ ಮತ್ತು ಅದಕ್ಕೆ ಅನ್ವಯಿಸುವ ಜಾರಿಯಲ್ಲಿರುವ ನಿಯಮಾವಳಿಗನುಗುಣವಾಗಿರುವ ಎಲ್ಲ ನಡಂವಳಿಗಳನ್ನು ಪಾಲಿಸುತ್ತಿದ್ದಾರೆ.